**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಶಿವಾನಂದ್ ಬಸವರಾಜ್ ಹಂಚಿನಾಳು | ಪ್ರಾಸಾ-11 |
| ತಂದೆಯ ಹೆಸರು | : ಬಸವರಾಜು ಹಂಚಿನಾಳು | ಚಾಸಾ-12 |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಏರ್ ಪೋರ್ಟ್ ವರ್ಕ್ | ದಿನಾಂಕಃ 06.03.2026. |
| ವಾಸಸ್ಥಳ | : ಚಿರಾಯು ಆಶ್ರಮ, ಬೆಂಗಳೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ನನ್ನ ತಾಯಿ.

ದಿ.07.07.2023 ರಂದು ಪುತ್ತೂರಿನಿಂದ ಚಾಸಾ-1 ರವರನ್ನು ಕರೆದುಕೊಂಡು ಉಜಿರೆಗೆ ಬಂದ ನಂತರ ಕಡೂರಿಗೆ ಹೋಗಲು ಬಸ್ ನ್ನು ಹತ್ತಿರುತ್ತೇನೆ. ನಂತರ ಚಾರ್ಮಡಿ ಘಾಟ್ ನ ಅಣ್ಣಪ್ಪ ದೇವಸ್ಥಾನದ 2 ಕೀ.ಮೀ ನಂತರದಲ್ಲಿ ಎದುರಿನಿಂದ ಮಂಗಳೂರಿನ ಕಡೆಗೆ ಹೋಗುವ ಚಿತ್ರದುರ್ಗ ದ ಸರ್ಕಾರಿ ಬಸ್ ನಾವು ಪ್ರಯಾಣಿಸುತ್ತಿದ್ದ ಬಸ್ ಗೆ ಡಿಕ್ಕಿ ಪಡಿಸಿರುತ್ತದೆ. ಸದರಿ ಅಪಘಾತದಲ್ಲಿ ಚಾಸಾ-1 ರವರಿಗೆ ಬಲಗೈ ನ ಮಧ್ಯದ ಬೆರಳು ಮತ್ತು ಮೆಲ್ಭಾಗದ ತುಟಿ ಮತ್ತು ಮೊಣಕಾಲು ಗಾಯಗೊಂಡಿರುತ್ತದೆ. ಅವರನ್ನು ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿರುತ್ತದೆ. ನಂತರ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ. KA-21-F-0215 ನ ಸರ್ಕಾರಿ ಬಸ್ ನಾವು ಪ್ರಯಾಣಿಸುತ್ತಿದ್ದ ಬಸ್ ಸಂಖ್ಯೆ KA-17-F-1901 ಬಸ್ ಗೆ ಡಿಕ್ಕಿ ಪಡಿಸಿರುತ್ತದೆ. ನಾನು ಪ್ರಯಾಣಿಸುತ್ತಿದ್ದ ಬಸ್ ನ್ನು ಚಾಲಾಯಿಸುತ್ತಿದ್ದವರ ಬಗ್ಗೆ ಮಾಹಿತಿ ಇಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಮಾ ಕೋರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಅಪಘಾತದ ನಂತರ ಚಾಸಾ-1 ರವರಿಗೆ ಸಂಭವಿಸಿರುವ ಗಾಯ ಬಗ್ಗೆ ಗಮನ ಕೊಡುತ್ತಿದ್ದೆವು ಹೊರತು ಯಾರು ಬಸ್ ನ್ನು ಚಲಾಯಿಸುತ್ತಿದ್ದರು ಎಂದು ನಾನು ನೋಡಿರುವುದಿಲ್ಲ. ಅಪಘಾತ ಸಂಭವಿಸಿದ ನಂತರ ಈ ದಿನ ನ್ಯಾಯಾಲಯಕ್ಕೆ ಬರುವ ವರೆಗೂ ಬಸ್ ನ ಸಂಖ್ಯೆಗಳ ಬಗ್ಗೆ ತಿಳಿದಿರಲಿಲ್ಲ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ಬಂದ ನಂತರ ಬಸ್ ನ ಸಂಖ್ಯೆಗಳ ಬಗ್ಗೆ ತಿಳಿದು ಬಂದಿರುತ್ತದೆ ಎಂದರೆ ಸರಿ. ಅಪಘಾತ ಸಂಭವಿಸಿದ ನಂತರ ಚಾಸಾ-1 ರವರೊಟ್ಟಿಗೆ ನ್ಯಾಯಾಲಯಕ್ಕೆ ಬಂದಿದ್ದನ್ನು ಹೊರತುಪಡಿಸಿ ಇತರೆ ಯಾವುದೇ ದಿನ ನಾನು ಮೂಡಿಗೆರೆ ಅಥವಾ ಬಣಕಲ್ ಗೆ ಬಂದಿರುವುದಿಲ್ಲ. ಅಪಘಾತ ಸಂಭವಿಸಿದ ಸ್ಥಳದಲ್ಲಿ ಒಂದು ಯು ಟರ್ನ್ ಇರುತ್ತದೆ ಎಂದರೆ ಸರಿ. ಆದ ಕಾರಣ ಆ ತಿರುವಿನಿಂದ ಮುಂದೆ ಹೋಗುವವರೆಗೂ ಇತರೆ ವಾಹನಗಳು

ಬರುತ್ತಿರುವ ಬಗ್ಗೆ ತಿಳಿದು ಬರುವುದಿಲ್ಲ ಎಂದರೆ ಸರಿ. ಎದುರಿನಿಂದ ಬಂದ ವಾಹನವು ಅತಿವೇಗದಿಂದ ಬಂದ ಕಾರಣ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.